**ಸಿ.ಸಿ. ಸಂ.** *13 /2017*

**ಪಿಡಬ್ಲೂಃ** *02*

**ಇಂದು ದಿಃ** *09.12.2022* **ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಆರೋಪಿ ಪರ ಶ್ರೀ.ಸಿ.ಕೆ.ಎಂ. ವಕೀಲರಿಂದಃ**

ಟ್ರಸ್ಟ್‌ನ ಹಣ ಸೆಲ್ಫ್ ಡ್ರಾ ಆಗಿದೆ. ಸೆಲ್ಫ್ ಡ್ರಾ ಯಾರ ಹೆಸರಿನಲ್ಲಿ ಆಗಿದೆ ನನಗೆ ಮಾಹಿತಿ ಇಲ್ಲ. ಆಡಿಟ್ ಮಾಡುವಾಗ ಬ್ಯಾಂಕ್ ಖಾತೆಯಲ್ಲಿ ಯಾರು ಹಣವನ್ನು ಡ್ರಾ ಮಾಡಬೇಕು ಎಂಬುವರ ಹೆಸರು ಆಡಿಟರ್ ಗೆ ತಿಳಿದಿರ ಬೇಕು ಎಂದರೆ ಸರಿ. ನಾನು *1994* ರಿಂದ *2010* ರ ವರೆಗೆ ಮಾಡಿರುವ ಆಡಿಟ್ ಅವಧಿಯಲ್ಲಿ ಟ್ರಸ್ಟ್‌ನ ಹಣವನ್ನು ಸೆಲ್ಫ್ ಡ್ರಾ ಮಾಡಲು ಯಾರಿಗೆ ಅಧಿಕಾರ ಇತ್ತು ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಖಚಿತವಾದ ವ್ಯವಹಾರದ ಬಗ್ಗೆ ಕೇಳಿದರೆ ಮಾತ್ರ ಹೆಸರು ಹೇಳಬಹುದು ಸಾಕ್ಷಿ ಮುಂದುವರೆದು ಬುಕ್ಸ್ ಆಫ್ ಅಕೌಂಟ್ಸ್ ಇಲ್ಲದೇ ಇದ್ದ ಕಾರಣಕ್ಕೆ ಹೆಸರನ್ನು ಖಚಿತವಾಗಿ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಗೆ ಬ್ಯಾಂಕ್ ಆಫ್ ಮಹಾರಾಷ್ಟ್ರದ ದಿಃ*23.06.2006* ರ ಚೆಕ್ ನ ದೃಢೀಕೃತ ನಕಲು ತೋರಿಸಿದ್ದು ಸಾಕ್ಷಿ ಅದನ್ನು ನೋಡಿ ಅದು ಟ್ರಸ್ಟ್ ಖಾತೆಗೆ ಸಂಬಂಧ ಪಟ್ಟಿದ್ದು ಮತ್ತು ಅದರ ಹಿಂದೆ ಇರುವ ಸಹಿ ಆಗಿನ ಮ್ಯಾನೇಜಿಂಗ್ ಟ್ರಸ್ಟಿ ಗೋವಿಂದಯ್ಯರವರದಾಗಿದ್ದು ಎಂದು ಒಪ್ಪಿಕೊಂಡಿರುವ ಕಾರಣ ಸದರಿ ದಾಖಲೆಯನ್ನು ನಿ.ಡಿ.*15* ಎಂದು ಗುರುತಿಸಲಾಯಿತು. ಸಾಕ್ಷಿಗೆ *5* ಬ್ಯಾಂಕ್ ಆಫ್ ಮಹಾರಾಷ್ಟ್ರದ ಚೆಕ್ ಗಳ ದೃಢೀಕೃತ ನಕಲುಗಳನ್ನು ತೋರಿಸಿದ್ದು ಸಾಕ್ಷಿ ಅವುಗಳನ್ನು ನೋಡಿ ಅವು ಟ್ರಸ್ಟ್ ಖಾತೆಗೆ ಸಂಬಂಧ ಪಟ್ಟಿದ್ದು ಮತ್ತು ಅದರ ಹಿಂದೆ ಇರುವ ಸಹಿ ಆಗಿನ ಮ್ಯಾನೇಜಿಂಗ್ ಟ್ರಸ್ಟಿ ಗೋವಿಂದಯ್ಯರವರದಾಗಿದ್ದು ಎಂದು ಒಪ್ಪಿಕೊಂಡಿರುವ ಕಾರಣ ಸದರಿ ದಾಖಲೆಯನ್ನು ನಿ.ಡಿ.*16* ರಿಂದ *20* ಎಂದು ಗುರುತಿಸಲಾಯಿತು.

ಸಾಕ್ಷಿಗೆ ಬ್ಯಾಂಕ್ ಆಫ್ ಮಹಾರಾಷ್ಟ್ರದ ಪಾಸ್ ಪುಸ್ತಕದ ದೃಢೀಕೃತ ನಕಲು ತೋರಿಸಿದ್ದು ಸಾಕ್ಷಿ ಅದನ್ನು ನೋಡಿ ಅದು ಟ್ರಸ್ಟ್ ಖಾತೆಗೆ ಸಂಬಂಧ ಪಟ್ಟಿದ್ದು ಎಂದು ಒಪ್ಪಿಕೊಂಡಿರುವ ಕಾರಣ ಸದರಿ

ದಾಖಲೆಯನ್ನು ನಿ.ಡಿ.21 ಎಂದು ಗುರುತಿಸಲಾಯಿತು. ನಾನು ಆಡಿಟ್ ಮಾಡುವಾಗ ನಿ.ಡಿ. 21 ಅನ್ನು ನೋಡಿದ್ದೆನೋ ಇಲ್ಲವೋ ನೆನಪಿಲ್ಲ. ನಿ.ಡಿ.21 ರ ಪ್ರಕಾರ ಎಲ್ಲಾ ವ್ಯವಹಾರವನ್ನು ಆಗಿನ ಮ್ಯಾನೇಜಿಂಗ್ ಟ್ರಸ್ಟಿ ಗೋವಿಂದಯ್ಯರವರು ಮಾಡಿದ್ದಾರೆ ಎಂದರೆ ಸಾಕ್ಷಿ ಅದನ್ನು ಈಗ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. ನಾನು ಸಾಕ್ಷ್ಯ ಕೊಡುವ ಪೂರ್ವದಲ್ಲಿ ದಾಖಲೆಗಳನ್ನು ಪರಿಶೀಲನೆ ಮಾಡಿ ಸಾಕ್ಷ್ಯ ಕೊಡುತ್ತಿದ್ದೇನೆ. ಆಡಿಟ್ ಮಾಡುವಾಗ ಟ್ರಸ್ಟ್ ಯಾವ ಬ್ಯಾಂಕಿನಲ್ಲಿ ಖಾತೆ ಹೊಂದಿರುತ್ತದೆ, ಆ ಖಾತೆಯ ಪಾಸ್ ಬುಕ್ ಮುಖ್ಯವಾದ ದಾಖಲೆಯಾಗಿರುತ್ತದೆ ಎಂದರೆ ಸರಿ.

ನಾನು 1994 ರಿಂದ 2010 ರ ವರೆಗೆ ಆಡಿಟ್ ಅನ್ನು ಎರಡು ಅವಧಿಯಲ್ಲಿ ಅಂದರೆ 1994-1995 ರಿಂದ 2004-05 ಮತ್ತು 2005-06 ರಿಂದ 2008-09 ವರೆಗೆ ಹಾಗೂ 2009-2010 ನೇ ಸಾಲಿನ ಅಡಿಟ್ ಮಾಡಿದ್ದೇನೆ. ನನ್ನ ಆಡಿಟ್ ವರದಿಯಲ್ಲಿ ಆರೋಪಿ ಹಣ ದುರುಪಯೋಗ ಮಾಡಿಕೊಂಡಿದ್ದಾರೆ ಎಂಬ ವರದಿ ಇಲ್ಲ ಎಂದರೆ ಸರಿ. ಆರೋಪಿ ಯಾವುದೇ ಹಣ ದುರುಪಯೋಗ ಮಾಡದೇ ಇರುವ ಕಾರಣಕ್ಕೆ ನನ್ನ ಆಡಿಟ್ ವರದಿಗಳನ್ನು ಹಣ ದುರುಪಯೋಗದ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನಗೆ ಕೊಟ್ಟ ಮಾಹಿತಿಯ ಆಧಾರದ ಮೇಲೆ ನಾನು ಆಡಿಟ್ ವರದಿ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ನನಗೆ ಕೊಟ್ಟ ಮಾಹಿತಿಯಲ್ಲಿ ಆರೋಪಿ ಹಣ ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ಕಂಡು ಬರುವುದಿಲ್ಲ ಎಂದರೆ ಸರಿ.

ಸಾಕ್ಷಿಗೆ 2010 ನೇ ಸಾಲಿನ ಆಡಿಟ್ ವರದಿಯ ದೃಢೀಕೃತ ನಕಲು ತೋರಿಸಿದ್ದು ಸಾಕ್ಷಿ ದಾಖಲೆಯನ್ನು ನೋಡಿ ಒಪ್ಪಿರುವ ಕಾರಣ ಅದನ್ನು ನಿ.ಡಿ. 22 ಎಂದು ಗುರುತಿಸಲಾಯಿತು. ನಿ.ಡಿ.22 ರಲ್ಲಿ ಟ್ರಸ್ಟ್ ನವರೆ ಆರೋಪಿಗೆ ರೂ.10,537/- ಕೊಡಬೇಕು ಎಂದು ನಮೂದು ಇದೆ ಎಂದರೆ ಸರಿ. ನಿ.ಡಿ. 22 ರಲ್ಲಿ ಸದರಿ ಹಣ ಅರೋಪಿಗೆ ಪಾವತಿಯಾದ ಬಗ್ಗೆ ನಮೂದು ಇರುವುದಿಲ್ಲ. ಸಾಕ್ಷಿ ಮುಂದುವರೆದು ಸದರಿ ಹಣ ಬಾಕಿ ಇದೆ ಎಂಬ ಮಾಹಿತಿ ಆರೋಪಿಯೇ ಹೇಳಿದ್ದಾರೆ ಎಂದು ನುಡಿಯತ್ತಾರೆ. ಸದರಿ ಮಾಹಿತಿ ಮೌಖಿಕ ಮಾಹಿತಿಯೋ ಅಥವಾ ಲಿಖಿತ ಮಾಹಿತಿಯೋ ಹೇಳಲಾಗುವುದಿಲ್ಲ. ಟ್ರಸ್ಟ್ ನ ಹಣ ಕಾಸಿನ ವ್ಯವಹಾರದಲ್ಲಿರುವ ನ್ಯೂನ್ಯತೆಗಳ ಬಗ್ಗೆ ಮಾಹಿತಿಯು ನನಗೆ

ವಿಚಾರಣಾಧಿಕಾರಿಯವರ ವರದಿಯ ಅಧಾರದ ಮೇಲೆ ಗೊತ್ತಾಗಿರುತ್ತದೆ. ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಶ್ರೀ.ಸಿದ್ದೇಗೌಡ ರವರು ವಿಚಾರಣಾಧಿಕಾರಿಯಾಗಿದ್ದರು. ವಿಚಾರಣಾಧಿಕಾರಿ ರವರ ವರದಿಯ ಪೂರ್ವದಲ್ಲಿ ನನಗೆ ಹಣಕಾಸಿನ ದುರುಪಯೋಗದ ಬಗ್ಗೆ ಮಾಹಿತಿ ಇರಲಿಲ್ಲ.

ಸಾಕ್ಷಿಗೆ ದಿಃ 28.04.2016 ರಂದು ಕಾರ್ಯದರ್ಶಿ ಮಿಳಿಂದ ವಿಧ್ಯಾಸಂಸ್ಥೆಗೆ ಕೊಟ್ಟಿರುವ ವರದಿಯ ದೃಢೀಕೃತ ನಕಲನ್ನು ತೋರಿಸಿದ್ದು ಸಾಕ್ಷಿ ಸದರಿ ದಾಖಲೆಯನ್ನು ಒಪ್ಪಿರುವ ಕಾರಣ ಅದನ್ನು ನಿ.ಡಿ.23 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ನಿ.ಡಿ. 23 ಅನ್ನು ಬೈಲುಕುಪ್ಪೆ ಪೊಲೀಸರು ಸಂಸ್ಥೆಗೆ ಪತ್ರ ಬರೆದಿದ್ದು ಮತ್ತು ಸಂಸ್ಥೆಯವರು ನನಗೆ ವರದಿ ಕೇಳಿದ ಆಧಾರದ ಮೇಲೆ ಅದನ್ನು ನೀಡಿರುತ್ತೇನೆ ಎನ್ನುತ್ತಾರೆ. ನಾನು ವಿಚಾರಣಾಧಿಕಾರಿಗೆ ದಿಃ07.04.2011 ರಂದು ಹೇಳಿಕೆ ಕೊಟ್ಟಿರುತ್ತೇನೆ. ನನ್ನ ಆಡಿಟ್ ಅವಧಿಯಲ್ಲಿ ಆರೋಪಿಗೆ ಹಣಕಾಸಿನ ವ್ಯವಹಾರ ವಹಿಸಿರುವ ಬಗ್ಗೆ ಯಾವುದೇ ದಾಖಲೆಯನ್ನು ನೋಡಿಲ್ಲ. ವಿಚಾರಣಾಧಿಕಾರಿಗಳಿಗೆ ನಾನು ಆರೋಪಿ ಇಷ್ಟು ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆಂದು ಹೇಳಿಕೆ ಕೊಟ್ಟಿಲ್ಲ. ನಾನು ಗೋವಿಂದಯ್ಯರವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

***( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೇ.ಕೇ.ಸರಿ. ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**